




# ಬಾಟಲ್‌ನಲ್ಲಿ ಬಾಲೆ




ಕೇವಲ ಎರಡೇ ಎರಡು ಅಡಿ ಉದ್ದದ ಗಾಜಿನ ಬಾಟಲ್‌ನಲ್ಲಿ ಇಡೀ ದೇಹವನ್ನು ಮುದುಡಿಸಿ ಕುಳಿತುಕೊಳ್ಳಲು ಸಾಧ್ಯವೇ? ನಮ್ಮ ನಿಮ್ಮಂತವರಿಗೆ ಖಂಡಿತಾ ಸಾಧ್ಯವಿಲ್ಲ ಬಿಡಿ. ಆದರೆ ಲಂಡನ್ ನಗರದ ಕೆಂಟ್ ಬಳಿಯ ಡಾರ್ಟ್‌ಫೋರ್ಡ್ ನಗರದ ಡೇನಿಯಲ್ ಮಾರ್ಟಿನ್‌ಗೆ ಇದೆಲ್ಲಾ ನೀರು ಕುಡಿದಷ್ಟು ಸಲೀಸು!

ಇಪ್ಪತ್ನಾಲ್ಕು ವರ್ಷದ ಈಕೆ ಮಾಡುವ ಭಯಾನಕ ಸರ್ಕಸ್‌ಗಳನ್ನು ನೋಡಿದರೆ ಎಂಥವರೂ ಒಂದು ಕ್ಷಣ ಬೆಚ್ಚಿ ಬೀಳುತ್ತಾರೆ. ಸುತ್ತಿಗೆಯಿಂದ ಮೂಗಿನ ಮೇಲೆ ಮೊಳೆ ಹೊಡೆದುಕೊಳ್ಳುವುದು, ಅತ್ಯಂತ ಹರಿತವಾಗಿರುವ ಸಮುರಾಯ್ ಕತ್ತಿಗಳಿಂದ ಮಾಡಿರುವ ಏಣಿಯನ್ನು ಏರುವುದು, ಗಾಜಿನ ಚೂರುಗಳ ಮೇಲೆ ಬರಿಗಾಲಿನಲ್ಲಿ ಹಾರುವುದು, ರೇಜರ್ ಬ್ಲೇಡ್‌ಗಳನ್ನು ನುಂಗುವುದು, ಮೊಳೆಗಳ ಹಾಸಿಗೆಯಲ್ಲಿ ಮಲಗುವುದು –ಹೀಗೆ ಈಕೆಯ ಸಾಹಸದ ಪಟ್ಟಿ ಮುಂದುವರೆಯುತ್ತಲೇ ಹೋಗುತ್ತದೆ. ಇಂತಹ ದುಸ್ಸಾಹಸಗಳನ್ನು ಮನೋರಂಜನೆಯ ಹೆಸರಿನಲ್ಲಿ ಪ್ರದರ್ಶನ ನೀಡುವುದೆಂದರೆ ಈಕೆಗೆ ಬಲು ಇಷ್ಟ.

ಈಕೆಗೆ 13 ವರ್ಷದವಳಿದ್ದಾಗ ತಾಯಿ ರುತ್ ಗೋಲ್ಡ್‌ಸ್ಮಿತ್ ಇವಳನ್ನು ಹಾರರ್ ಸರ್ಕಸ್ ತೋರಿಸಲು ಕರೆದುಕೊಂಡು ಹೋಗಿದ್ದರಂತೆ. ಆ ಪ್ರದರ್ಶನ ಇವಳ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತಂತೆ. ಅಲ್ಲಿಂದ ಇಂತಹ ಸಾಹಸವನ್ನು ಮಾಡುವ ಹಂಬಲ ಈಕೆಯಲ್ಲಿ ಮೂಡಿದೆ. ಓದಿನಲ್ಲೂ ಮುಂದಿದ್ದ ಈಕೆ ಡಾಕ್ಟರ್ ಆಗಬೇಕೆಂಬುದು ತಾಯಿಯ ಆಸೆಯಾದರೆ, ಭಯಾನಕ ಸರ್ಕಸ್‌ಗಳನ್ನು ಕಲಿತು ಪ್ರದರ್ಶನ ನೀಡಬೇಕೆಂಬುದು ಮಗಳ ಬಯಕೆ. ಕೊನೆಗೂ ಕಾಲೇಜಿಗೆ ಅರ್ಧದಲ್ಲೇ ಶರಣು ಹೊಡೆದು ಲಂಡನ್‌ನಲ್ಲಿ 'ಡಿಪ್ಲೊಮಾ ಇನ್ ಪರ್ಫಾರ್ಮಿಂಗ್ ಆರ್ಟ್ಸ್' ಓದಿಕೊಂಡು 'ಸರ್ಕಸ್ ಆಫ್ ಹಾರರ್'ಗೆ ಅರ್ಜಿ ಸಲ್ಲಿಸಿದಳು. ಅಲ್ಲಿ ಸರ್ಕಸ್ ಕಂಪೆನಿಯವರು ಒಡ್ಡಿದ ಗಾಜಿನ ಬಾಟಲ್‌ನೊಳಗೆ ತೂರಿ ಕುಳಿತುಕೊಳ್ಳುವ ಸವಾಲಿನಲ್ಲಿ ಯಶಸ್ಸು ಗಳಿಸಿದಳಂತೆ.

ತನ್ನ ವಿದ್ಯಾಭ್ಯಾಸಕ್ಕೆ ಕಾಲ ಮಿಂಚಿಲ್ಲ ಎಂದುಕೊಂಡಿರುವ ಈಕೆ ಈ ಸಾಹಸದ ಜತೆಗೆ ಓದುವ ಹಂಬಲವನ್ನೂ ವ್ಯಕ್ತಪಡಿಸುತ್ತಾಳೆ.

■ ವಿದ್ಯಾ ವಿ ಹಾಲಭಾವಿ